ಓ.ಎಸ್ 315/2013

ಡಿ.ಡಬ್ಲ್ಯೂ.1

ದಿನಾಂಕಃ 22.09.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರಿದ ಪಾಟೀಸವಾಲು **ವಾದಿ ಪರ ಶ್ರೀ ಸಿ ಎಸ್ ಎಸ್ ವಕೀಲರಿಂದಃ**</u>

ದಾವಾಸ್ತಿಯ ಹಳೆ ಖಾತೆ ನಂ.474/1251, ಹೊಸ ಖಾತೆ ನಂ.474/1252 ಎಂದರೆ ಸರಿ. ನಿಪಿ17ರ 2ನೇ ಪುಟದಲ್ಲಿ ಕಂಡುಬರುವ ಮನೆ ನಂ.3ರ ಆಸ್ತಿಯ ಮೇಲೆ ನಿಮಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿ. ನಿಪಿ17ರ ಮನೆ ನಂ.3ರಲ್ಲಿ ನಮೂದಿಸಿರುವ 681 ಚದರಡಿಯ ಜಾಗಕ್ಕೆ ವಾದಿಯರು ಸಂಪೂರ್ಣ ಹಕ್ಕುದಾರರು ಎಂದರೆ ಸರಿ. ನಿಪಿ17ರ 4ನೇ ಪುಟದಲ್ಲಿ ಪ್ರತ್ಯೇಕವಾಗಿ ಮನೆ ನಂ.3ನ್ನು ತೋರಿಸಲಾಗಿದೆ ಎಂದರೆ ಸರಿ. ವಾದಿಯರು ಮೊದಲನೇ ಅಂತಸ್ತಿನಲ್ಲಿರುವ ತಮ್ಮ ಬಾಬ್ತು ಮನೆ ನಂ.3ಕ್ಕೆ ಹೋಗಲು ಪಶ್ಚಿಮ ದಿಕ್ಕಿನಲ್ಲಿ ಇರುವ ಸ್ಟೇರ್ ಕೇಸ್ ಅನ್ನು ಉಪಯೋಗಿಸುತ್ತಾರೆ ಹಾಗೂ ಅದನ್ನು ಉಪಯೋಗಿಸಲು ಅವರಿಗೆ ಹಕ್ಕು ಇದೆ ಎಂದರೆ ಸರಿ. ವಾದಿಯರಿಗೆ ಸ್ಟೇರ್ ಕೇಸ್ ನ ಕೆಳಗೆ ಇರುವ ಸಂಪ್ ನಿಂದ ಅವರ ಮನೆಗೆ ನೀರನ್ನು ತೆಗೆದುಕೊಳ್ಳುತ್ತಾರೆ ಹಾಗೂ ಅವರಿಗೆ ಅದನ್ನು ಪಡೆಯಲು ಹಕ್ಕಿದೆ ಎಂದರೆ ಸರಿ. ಸಂಪ್ ಗೆ ಮುನ್ಸಿಪಾಲಿಟಿಯಿಂದ ನೀರಿನ ಕನೆಕ್ಷನ್ ಇದೆ ಎಂದರೆ ಸರಿ.

ಈಗ ಸಾಕ್ಷಿ ಹೇಳಿದ ಹಾಗೆ ವಾದಿಯರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಬಹುದು, ಅದಕ್ಕೆ ನಿಮಗೇನು ತಕರಾರು ಇಲ್ಲ ಎಂದರೆ ಸರಿ. ಈಗ ಹೇಳಿದ ಹಾಗೆ ಡಿಕ್ರಿ ಮಾಡಲು ಯಾವುದೇ ತಕರಾರು ಇಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.